# ಧಾರವಾಡ ಹುಡುಗಿಯ ಬಣ್ಣದ ಕನಸುಗಳು



‘ಹದಿನೇಳೆಂಟು’ ಸಿನಿಮಾ ಮೂಲಕ ಕನ್ನಡ ಸಿನಿಲೋಕಕ್ಕೆ ಪರಿಚಿತರಾದ ಶರ್ಲಿನ್ ಮಾಣಿಕಪ್ರಭು ಭೋಸಲೆ, ನಟನೆ ನೆಚ್ಚಿಕೊಂಡು ಬೆಂಗಳೂರಿನ ಹಾದಿ ಹಿಡಿದವರು. ಸಮಾಜಕ್ಕೆ ಸ್ಪಂದಿಸುವಂಥ ಕಥೆ, ಪಾತ್ರಗಳಲ್ಲಿ ತಮ್ಮನ್ನು ತಾವು ಕಾಣುವ ಹಂಬಲಿಕೆ ಅವರದ್ದು.

■ ಸುಮಲತಾ ಎನ್‌.

‘ಸಮಾಜದಲ್ಲಿ ನಮ್ಮ ಸುತ್ತಮುತ್ತಲೇ ಹಲವು ಕಥೆಗಳಿವೆ. ಸಮಾಜ ತಿಳಿಯಲೇಬೇಕಾದ, ತಿಳಿದು ಎಚ್ಚರಗೊಳ್ಳಬೇಕಾದ ಹಲವು ಸಂಗತಿಗಳಿವೆ. ಅದರಲ್ಲೂ ಟೀನೇಜ್ ಮಕ್ಕಳ ಸಮಸ್ಯೆ, ಗೋಜಲುಗಳು, ಅವುಗಳ ಸೂಕ್ಷ್ಮತೆಗಳ ಬಗ್ಗೆ ಪೋಷಕರು, ಸಮಾಜ ಸೂಕ್ತ ರೀತಿ ಸ್ಪಂದಿಸಬೇಕಿದೆ. ಅಂಥ ಒಂದು ಸಮಸ್ಯೆಯನ್ನು ಬಿಂಬಿಸುವ ‘ಹದಿನೇಳೆಂಟು’ ಸಿನಿಮಾ ನನಗೆ ಆಸಕ್ತಿದಾಯಕ ಎನಿಸಿದ್ದೂ ಇದೇ ಕಾರಣಕ್ಕೆ...’

ಹದಿಹರೆಯದ ಸಮಸ್ಯೆಯ ಎಳೆಯನ್ನಿಟ್ಟುಕೊಂಡು ಪೃಥ್ವಿ ಕೋಣನೂರು ನಿರ್ದೇಶಿಸಿರುವ ‘ಹದಿನೇಳೆಂಟು’ ಸಿನಿಮಾದಲ್ಲಿ, ಟೀನೇಜ್ ಹುಡುಗಿ ದೀಪಾಳ ಪಾತ್ರದಲ್ಲಿ ಕಾಣಿಸಿಕೊಂಡಿರುವ ಶರ್ಲಿನ್ ಮಾಣಿಕಪ್ರಭು ಭೋಸಲೆ, ತಮ್ಮ ಮೊದಲ ಸಿನಿಮಾ ಬಗ್ಗೆ ಪರಿಚಯ ಮಾಡಿಕೊಂಡಿದ್ದು ಹೀಗೆ.

ಶರ್ಲಿನ್, ಮೂಲತಃ ಧಾರವಾಡದ ಹುಡುಗಿ. ಹತ್ತನೇ ತರಗತಿಗೆ ಬರುತ್ತಿದ್ದಂತೆ ನಟನೆಯೆಡೆಗೆ ಏಕಾಏಕಿ ಆಸಕ್ತಿ ಬೆಳೆಸಿಕೊಂಡ ಶರ್ಲಿನ್, ಮುಂದೊಂದು ದಿನ ತೆರೆಯ ಮೇಲೆ ತಮ್ಮನ್ನು ತಾವು ನೋಡಲೇಬೇಕು ಎಂಬ ಕನಸು ಕಟ್ಟಿಕೊಂಡಿದ್ದವರು.

ಪಿಯುಸಿ ಮುಗಿಯುತ್ತಿದ್ದಂತೆ, ಓದಿನೊಂದಿಗೆ ಕನಸನ್ನೂ ಗಟ್ಟಿಮಾಡಿಕೊಳ್ಳಲು ಬೆಂಗಳೂರಿನ ಹಾದಿ ಹಿಡಿದರು. ಬೆಂಗಳೂರಿನ ನ್ಯಾಷನಲ್ ಕಾಲೇಜಿನಲ್ಲಿ ಬಿಸಿಎಗೆ ಸೇರಿಕೊಂಡ ಅವರಿಗೆ ನಟನೆಯ ಮೊತ್ತ ಮೊದಲ ಅವಕಾಶ ದೊರೆತಿರುವುದು ‘ಹದಿನೇಳೆಂಟು’ ಸಿನಿಮಾ ಮೂಲಕ.

‘ನಾನು ಬಿಸಿಎ ಸೇರಿಕೊಂಡಾಗ ಕೊರೊನಾ ಸೋಂಕಿನ ಕಾರಣ ಲಾಕ್‌ಡೌನ್ ವಿಧಿಸಲಾಗಿತ್ತು. ಹೀಗಾಗಿ ಎರಡನೇ ಸೆಮಿಸ್ಟರಿನಿಂದ ನಾಲ್ಕನೇ ಸೆಮಿಸ್ಟರ್‌ವರೆಗೂ ಆನ್‌ಲೈನ್‌ನಲ್ಲೇ ಓದು. ಆ ಪರಿಸ್ಥಿತಿಯಲ್ಲಿ ನಟನೆ ಕುರಿತು ಯೋಚಿಸಲು ಸಾಧ್ಯವಾಗದಿದ್ದರೂ ನಟಿಸಬೇಕೆಂಬ ಆಸೆ ಮಾತ್ರ ಬಿಟ್ಟುಹೋಗಿರಲಿಲ್ಲ. ಪರಿಸ್ಥಿತಿ ತಿಳಿಯಾಗುತ್ತಿದ್ದಂತೆ, ಅವಕಾಶವೊಂದು ಸಿಕ್ಕಿತ್ತು. ಪೃಥ್ವಿ ಕೋಣನೂರು ಅವರು ತಮ್ಮ ಸಿನಿಮಾವೊಂದಕ್ಕಾಗಿ ಟೀನೇಜ್ ಹುಡುಗಿಯ ಮುಖ್ಯಪಾತ್ರಧಾರಿಗೆ ಹುಡುಕಾಟ ನಡೆಸುತ್ತಿರುವುದಾಗಿ ನಮ್ಮ ಕಾಲೇಜಿನ ಅಧ್ಯಾಪಕರೊಬ್ಬರು ಮೆಸೇಜ್ ಮಾಡಿದ್ದರು. ಇದೇ ನನಗೆ